ಯಕ್ಷಗಾನ ಪ್ರಸಂಗ

ಅಲ್ಲಮ ದರ್ಶನ

ಕವಿ

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಸೆಪ್ಟೆಂಬರ್ ೨೭, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

ಗೌರವಾನ್ವಿತ ಸಂಪಾದಕ ಮಂಡಳಿ:

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂ++ಗಳಿಮನೆ

ಗೌರವಾನ್ವಿತ ಸಲಹಾ ಮಂಡಳಿ:

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

ಕಾರ್ಯಕಾರಿ ಮಂಡಳಿ:

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

ಗೌರವಾನ್ವಿತ ಸ್ವಯಂಸೇವಕರು:

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

ಸಹಕಾರ:

ಪ್ರಸಂಗ ಕವಿಗಳು:

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

ಕವಿಚರಿತ್ರೆ ಮತ್ತು ಪ್ರಸಂಗಯಾದಿ:

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

ಸಂಸ್ಥೆಗಳು:

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

ಯಕ್ಷವಾಹಿನಿ ಸಂಸ್ಥೆ

ಗೌರವಾನ್ವಿತ ಸಲಹಾ ಮಂಡಳಿ:

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

ಆರ್ಥಿಕ ಸಹಾಯ:

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

ಪುಸ್ತಕ ಸಹಾಯ:

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.

ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು

ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು

ರವಿ ಮಡೋಡಿ
ಯೋಜನಾಧ್ಯಕ್ಷರು

ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು
ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ
ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ
ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

ಸಾರಾಂಶ

ಪ್ರಸಂಗ ವಿಧ:

ಐತಿಹಾಸಿಕ

ಆಧಾರ ಗ್ರಂಥ:

ಬಯಲಗಳಿಕೆಯ ಬೆಳಗು (ಗೂಳೂರು ಸಿದ್ಧವೀರಣ್ಣೊಡೆಯರು ಸಂಗ್ರಹಿಸಿದ ಪ್ರಭುದೇವರ ಶೂನ್ಯಸಂಪಾದನೆಯ ವ್ಯಾಖ್ಯೆ)

ಭಾಷೆ:

ಕನ್ನಡ

ಹಿಂದಿನ ಪ್ರಕಾಶನಗಳ ವಿವರ:

ಗಣಕೀಕೃತ ಪ್ರತಿ

ಹಕ್ಕುಸ್ವಾಮ್ಯ ವಿವರ:

ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

ಒಟ್ಟು ಪದ್ಯಗಳು:

೪೨

ಪಾತ್ರಗಳು:

ಅಲ್ಲಮಪ್ರಭು, ಮುಕ್ತಾಯಕ್ಕ

ಕಥಾ ಸಾರಾಂಶ:

ಶರಣಶ್ರೇಷ್ಠ ಅಲ್ಲಮನು ಜ್ಞಾನಪ್ರಸರಣಕ್ಕಾಗಿ ಸಂಚರಿಸುತ್ತಿದ್ದನು. ಶಿವಶರಣರಲ್ಲಿ ಹಿರಿಯವನೆನಿಸಿದ ಅಜಗಣ್ಣನ ಅಗಲುವಿಕೆಯಿಂದ ಅವನ ತಂಗಿ ಮುಕ್ತಾಯಕ್ಕ ದುಃಖಿಸುತ್ತಿರುವಳು. ಅಲ್ಲಿಗೆ ಬಂದ ಅಲ್ಲಮ,ಮುಕ್ತಾಯಕ್ಕನನ್ನು ಕಂಡು ಅವಳ ಇತಿವೃತ್ತಾಂತ ಅರಿತು ಸಂವಾದ ನಡೆಸುವ ಕಥಾನಕ. ಇದರಲ್ಲಿ ಶಿವತತ್ತ್ವ,ಶಿವನಿಗೂ,ಜೀವನಿಗೂ ಇರುವ ಸಂಬಂಧ, ಲೋಕದ ಚಿತ್ರಣ, ಇದ್ದೂ ಇಲ್ಲದಂತೆ ಬದುಕುವ ವಿಧಾನ, ಬರಿದೇ ಶವವಾಗಬೇಕಾದ ಜೀವ ಶಿವನಾಗುವ ಪರಿಗಳನ್ನೆಲ್ಲಾ ಮನೋಜ್ಞವಾಗಿ ಹೇಳಲಾಗಿದೆ.

ಕವಿ ಪರಿಚಯ:

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕಬ್ಬಿನಾಲೆ ಎಂಬ ಹಳ್ಳಿ ಇವರ ಹುಟ್ಟೂರು. ತಂದೆ ಮಧುಸೂದನ ಭಟ್ಟ, ತಾಯಿ ಸುಮತಿ, ಪತ್ನಿ ಗೀತಾ. ಕನ್ನಡದಲ್ಲಿ ಎಂ. ಎ. ಮತ್ತು ಬಿ. ಇ. ಡಿ. ಪದವೀಧರರು. 'ಯಕ್ಷಗಾನ ಛಂದಸ್ಸು' ಕುರಿತ ಸಂಶೋಧನ ಪ್ರಬಂಧಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಬ್ಯಾಂಕ್ ಅಧಿಕಾರಿಗಳಾಗಿ ದುಡಿದು ಸ್ವಯಂನಿವೃತ್ತಿ ಪಡೆದ ಇವರು ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿದ್ದಾರೆ. ಅಷ್ಟಾವಧಾನಿಗಳೂ, ಯಕ್ಷಗಾನ ಕಲಾವಿದರೂ ಆಗಿರುವ ಇವರು ಯಕ್ಷಗಾನ ಛಂದಸ್ಸು, ಯಕ್ಷಗಾನ ಛಂದೋಗತಿ, ಅಂಬುರುಹದಳ, ಯಕ್ಷಗಾನ ಕವಿಕಾವ್ಯವಿಹಾರ, ಯಕ್ಷಗಾನ ಪ್ರಸಂಗ ಸಾಹಿತ್ಯ, ಮತ್ತೆ ಬರಲಿ ಭಾವಗೀತೆ, ತುಳುಪದಾರ್ಥ, ಪಳಂತುಳು ಕಾವ್ಯ, ಹೊಸ ಬ್ಯಾಂಕಿಂಗ್ ನಿಘಂಟು, ರಾಮನ ಹುಡುಕಾಟ, ಕುವೆಂಪು ಮತ್ತು ಅಧ್ಯಾತ್ಮ, ಕನಕಮುಂಡಿಗೆ ಮುಂತಾದ ಐವತ್ತಕ್ಕೂ ಹೆಚ್ಚು ಸಾಹಿತ್ಯಕೃತಿಗಳನ್ನು ರಚಿಸಿದ್ದಾರೆ.

ಮುಂಬಯಿಯಲ್ಲಿ ನಡೆದ ಅಖಿಲಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (೧೯೯೮) ವಹಿಸಿದ್ದ ಇವರಿಗೆ ಕರಾವಳಿರತ್ನ, ಆರ್ಯಭಟ, ಮುದ್ದಣ ರಜತಪುರಸ್ಕಾರ, ಜ್ಞಾನಜ್ಯೋತಿ, ತೌಳವಶ್ರೀ ಮುಂತಾದ ಪ್ರಶಸ್ತಿಗಳು ಸಂದಿವೆ.

ಇವರು ಬರೆದ ಪ್ರಸಂಗಗಳು: ಸುರತರಂಗಿಣಿ, ಕಿನ್ನರ ಕನ್ನಿಕಾ, ವನಿತೆ ವೈಶಾಲಿನಿ, ಶ್ರೀಕೃಷ್ಣದೇವರಾಯ, ದಶರಥ ದಿಗ್ವಿಜಯ, ಶಿವಸಂಧಾನ, ಪುಣ್ಯಕೋಟಿ, ವಂಶವಲ್ಲರಿ, ರಜತಸಂಭ್ರಮ, ಭ್ರೂಣರಕ್ಷೆ, ತರುಣಿ ತಿಲೋತ್ತಮೆ, ಶ್ರೀಕೃಷ್ಣಜನ್ಮ, ಶ್ರೀ ಚೆನ್ನವೀರ ಶರಣಪುರಾಣ, ಕಬ್ಬಿನಾಲೆ ಮಹಾತ್ಮೆ, ಕೈವಾರ ಕ್ಷೇತ್ರ ಮಹಾತ್ಮೆ, ಮರವಂತೆ ಕ್ಷೇತ್ರಮಹಾತ್ಮೆ, ಲಕ್ಷ್ಮೀಸ್ವಯಂವರ, ಆಕಾಶದೀಪ, ಶ್ರೀಕೃಷ್ಣಸಂಧಾನೊ (ತುಳು), ಭರತಾಗಮನ, ಋತುವೈಭವ, ಕರ್ಣರಸಾಯನ, ಅಲ್ಲಮ ಪ್ರಸಂಗ, ದಶಾನನ ಸ್ವಪ್ನಸಿದ್ಧಿ, ನಾಡಪ್ರಭು ಕೆಂಪೇಗೌಡ

ಪ್ರಸಂಗ ಸಾಹಿತ್ಯ

ಕಂದ
ಕರಿವದನನೆ ಕರುಣಾರ್ಣವ |
ಗಿರಿಜಾಸುತ ನಿನಗೆ ಮೊದಲಪೂಜೆಯ ಗೈವೆಂ ||
ಕೊರತೆಗಳೆಲ್ಲವ ತುಂಬಿಸಿ |
ಕಿರುನೋಟದಿ ನೋಡಿ ಹರಸು ಕಾವ್ಯದ ಗತಿಯಂ || ೧ || 1 ||

[ಅಲ್ಲಮಪ್ರಭುವಿನ ಪ್ರವೇಶ]

ಶಂಕರಾಭರಣ - ತ್ರಿವುಡೆ
ಓದುಮಾತಿನ ಸಂತೆ ಸುದ್ದಿಯ |
ವೇದಶಾಸ್ತ್ರಪುರಾಣ ಮೀರಿದ |
ಹಾದಿಯೊಳಗೆ ಗುಹೇಶನೆಂಬುದೆ |
ಭೇದ ಮೀರಿದ ಘನವದು || ೧ ||

ಮತ್ತೆ ತರ್ಕವು ತಗರ ಹೋರಟೆ |
ಭಕ್ತಿತೋರುತಲುಂಬ ಲಾಭವು |
ಸತ್ಯದನ್ವೇಷಣೆಗೆ ತಿರುಗುತ |
ಕತ್ತಲೆಗೆ ಬೆಳಕಾಗುತ || ೨ ||

ಅರಿವು ರೂಹನು ಪಡೆದ ತೆರ ನಿ |
ಬ್ಬೆರಗೆ ನಿಲುವಾಗಿರುವ ತೆರ ಸಂ |
ಚರಿಸುತಲ್ಲಮ ಬಂದ ಸುಂದರ |
ತಿರುಳುಗನ್ನಡ ದೇಶಕೆ || ೩ ||

[ಮುಕ್ತಾಯಕ್ಕನ ದುಃಖ]

ಬಾಡಿಪೋಗಿಹ ಮಲ್ಲಿಗೆಯ ಲತೆ |
ನೋಡಿ ಮುಕ್ತಾಯಕ್ಕ ದುಗುಡದಿ |
ರೂಢಿಯಿಂದಜಗಣ್ಣ ಬಯಲನು |
ಕೂಡಿದುದ ತಿಳಿದಳಲುತ || ೪ || 5 ||

ಧನ್ಯಾಸಿ - ರೂಪಕ
ಕತ್ತಲೆ ಬೆಳಗ ಕಾಂಬಂಥ ಸಂದೇಹದ |
ಮರ್ತ್ಯದ ಮಗಳು ನಾನಣ್ಣ ||
ಕಟ್ಟಿ ಕಣ್ಣಿಗೆ ಬಟ್ಟೆ ಕೊಟ್ಟು ಕನ್ನಡಿ ಕೈಗೆ |
ಬಿಟ್ಟು ಪೋದೆಯ ಅಜಗಣ್ಣ || ೧ ||

ಬಾಯೊಳಗರಿವನು ಮೆಲುಕಾಡಿ ಬಳಲುವ |
ಹೇಯದೊಳಿದೆ ಮರ್ತ್ಯಲೋಕ ||
ಸಾಯಲಾರದೆ ಬಾಳಲಾರದವರ ಬಿಟ್ಟು |
ನ್ಯಾಯವೇನಿದು ನಿನ್ನ ಯೋಗ || ೨ ||

ಆ ಕುರುಡನ ಕೈಯ ಲೋಕಾಂಧ ಪಿಡಿದಂತೆ |
ಮೂಕ ಕಾವ್ಯವನು ಪೇಳ್ದಂತೆ ||
ಸಾಕಾರಗೊಂಡ ಭಕ್ತಿಯ ಅಜಗಣ್ಣನ |
ನಾ ಕಾಣದಂತಾಯ್ತು ಶಿವನೆ || ೩ ||

ಆಮೆಯ ಶಿಶುವೊಲು ಆರೈಕೆತೋರದೆ |
ಸೀಮೆಯೊಳಾರೂಢಗೆಟ್ಟು ||
ಭೂಮದ ಭೇದವ ಭಿನ್ನಮಾಡುತಲಿಂತು |
ನೀ ಮಿಗೆವರಿದೆಯೇನಣ್ಣ || ೪ ||

ಸ್ಫಟಿಕಪ್ರಜ್ವಲಜ್ಯೋತಿ ಘಟದೊಳಗಿರೆ ದಿಟ |
ಪುಟಬಿಟ್ಟು ಸಟೆ ಬಳಸುವರೆ ||
ಕುಟಿಲಜಂತ್ರದ ಕೀಲು ಕೂಟಭೇದವು ತಪ್ಪಿ |
ಕಠಿನಮಂತ್ರವ ಪಠಿಸುವರೆ || ೫ || 10 ||

[ಅಲ್ಲಮ ಮುಕ್ತಾಯಕ್ಕನನ್ನು ಪ್ರಶ್ನಿಸುತ್ತಾನೆ]

ಕಾಂಭೋದಿ – ಝಂಪೆ
ಅಂಗೈಯ ಮೇಲೊಂದು ಅರಳ್ದ ತಲೆಯನು ಪಿಡಿದು |
ಕಂಗಳಲಿ ಮುತ್ತ ಪವಣಿಸುವಾಕೆ ಯಾರೆ ||
ಭೃಂಗವದು ಸಂದ ಸಂಪಗೆಯರಳ ತಾನುಂಬ |
ಅಂಗವರಿಯದೆ ಅಳುವೆ ನೀನೇಕೆ ನೀರೆ || ೧ ||

[ಮುಕ್ತಾಯಕ್ಕನ ಉತ್ತರ]

ಇಳೆಯೊಳಗೆ ತಂದೆತಾಯಿಗಳಿಲ್ಲದವಳಾನು |
ಬೆಳೆಯುತ್ತ ಮತಿಗೇಡಿಯಾಗಿರುವೆನಣ್ಣ ||
ತಲೆಯಳಿದು ನೆಲೆಗೆಟ್ಟು ಒಲಿದು ಶಿವನೊಳು ಸೇರ್ದ |
ಬೆಳಕು ಅಜಗಣ್ಣನಿಗೆ ಸಲೆ ಸಹೋದರಿಯು || ೨ || 12 ||

[ಅಲ್ಲಮನಿಂದ ಅಜಗಣ್ಣನ ಸ್ತುತಿ]

ಕೇದಾರಗೌಳ - ಅಟ್ಟ
ಕಾಣದುದನು ಕಂಡು ಕೇಳದುದನು ಕೇಳಿ |
ನಾನು ಪಾವನನಾದೆನು ||
ಮಾನಸದೊಳಗೆ ಮಹಾತುಮನಜಗಣ್ಣ |
ಜ್ಞಾನಿಗೆ ಶರಣೆಂಬೆನು || ೧ ||

[ಮುಕ್ತಾಯಕ್ಕನ ಪ್ರಶ್ನೆ]

ಅರರೆ ಏನ್ ಅಜಗಣ್ಣತಂದೆಯ ಸ್ಮರಿಸುತ್ತ |
ಶರಣೆಂಬ ನೀನು ಯಾರು ||
ಪುರವಾವುದೆಲ್ಲಿಂದ ಬಂದೆ ನಾಮವದೇನು |
ಅರುಹುತ್ತ ಕರುಣೆದೋರು || ೨ || 14 ||

[ಅಲ್ಲಮ ಮತ್ತು ಮುಕ್ತಾಯಕ್ಕ ಸಂವಾದ]

ಮಧ್ಯಮಾವತಿ - ಏಕ
ಧರಣಿಯಾಗಸಗಳು ಮನೆಗಟ್ಟಿದಂದು |
ತೊರೆಯು ಗಾಳಿಯು ಬೆಂಕಿ ಮೊಳೆದೋರದಂದು ||
ವರ ಜನನಿಯು ಜನಕನ ಸೇರಲಂದು |
ತರಳನಲ್ಲಮನಾಗಿ ಬಂದೆ ನಾನಿಂದು || ೧ ||

ಭಾವನಲ್ಲಯ್ಯ ನಾನಾಗಿಹೆನಿನ್ನು |
ಭಾವಿಸಿದರೆ ನೀನೆನಗೆ ನೆಗೆವೆಣ್ಣು ||
ಭಾವಕಿ ನಿನ್ನಯ ಕಳವಳವೇನು |
ದೇವ ಗುಹೇಶ ಕೈವಿಡಿದಾಕೆ ನೀನು || ೨ ||

ಅಜಗಣ್ಣನಗಲಿದ ದುಃಖದೊಳಿರುವೆ |
ನಿಜದಿ ನಿಮ್ಮನು ಕಂಡು ಸಯವಾಯ್ತು ಪ್ರಭುವೆ ||
ಸುಜನಬಾಂಧವರ ಸಂದರುಶನ ಸುಖವು |
ಬಿಜಯಗೈದುದರಿಂದೆ ಭಾಗ್ಯದ ದಿನವು || ೩ ||

ಅಡಿಗಡಿಗಿಂತು ನೀನಳುವುದು ಸಲ್ಲ |
ಒಡಲಿಲ್ಲದಾತಂಗೆ ಅಳಿವೆಂಬುದಿಲ್ಲ ||
ಕಡೆಗೆ ತನ್ನಲಿ ತಾನು ಸೇರಿಕೊಂಡವಗೆ |
ಬಿಡದೆ ದುಃಖಿಸುವರೆ ಭ್ರಾಂತಿಯೆ ನಿನಗೆ || ೪ || 18 ||

[ಮುಕ್ತಾಯಕ್ಕನ ದುಃಖ]

ಕೇದಾರಗೌಳ - ಅಷ್ಟ
ಎಂತು ಮರೆವೆನೆನ್ನ ಅಜಗಣ್ಣ ತಂದೆಯ |
ಚಿಂತೆನೀಗಿದ ಗುರುವು ||
ಅಂತಿಂಥ ಮಹಿಮನೆಂದೆನುತ ವರ್ಣಿಸಲಾರ |
ದಂಥ ಮಹಾಘನನು || ೧ ||

ಅಂಬರದೊಳು ಸುತ್ತಿಸುಳಿವ ದುಂಬಿಯ ಪೂರ್ಣ |
ಬಿಂಬ ಕಾಣಲುಬಹುದೆ ||
ಕಂಬನಿಯೊಳಗೆ ಹೊಂಗಿರಣದಿ ಮಾಣಿಕ್ಯ |
ವೆಂಬಂತೆ ಬೆಳಗಿದನು || ೨ ||

ಕಣ್ಣಲ್ಲಿ ಕುಳಿತಿರ್ದು ಬಣ್ಣದೋರುವ ಪರಿ |
ಬಣ್ಣಿಸಲೆನಗರಿದು ||
ಬಣ್ಣವಿಲ್ಲದ ಬಣ್ಣವನ್ನುಟ್ಟ ಎನ್ನಜ |
ಗಣ್ಣಗೆ ಬೆರಗಾದೆನು || ೩ ||

ನೀರಬೊಂಬೆಗೆ ನಿರಾಳದ ಗೆಜ್ಜೆಯನು ಕಟ್ಟಿ |
ತೋರಿದ ಬಯಲಿನಾಟ ||
ಘೋರಾಗ್ನಿ ಸಿಂಹಾಸನದಿ ಕರಗಿರದ ಕ |
ರ್ಪೂರಪುತ್ಥಳಿಯ ಯೋಗ || ೪ || 22 ||

ವಾರ್ಧಕ
ತನುವಿಡಿದೆನದರಿಂದಲನುವನರಿಯದೆ ಕೆಟ್ಟೆ |
ಮನವಿಡಿದೆನದರಿಂದ ತಿಳಿವನುಳಿಯದೆ ಕೆಟ್ಟೆ |
ತನುಮನದ ಬಳಿಕ ಭಾವದ ಬಯಕೆ ಹಿಂಗದಲೆ ಕೆಟ್ಟೆನು ವಿಯೋಗಿಯಾಗಿ ||
ಘನದರಿವ ನುಡಿದು ನಾ ಮರಹಿನೊಳಗಾದೆ ಮುಂ |
ದೆನಗಾನು ಕಾಣದಲೆ ಭಿನ್ನನಾಗುಳಿದೆನೈ |
ಘನವೇದ್ಯನಜಗಣ್ಣನೆಂಬ ಮಹಿಮನು ಎನ್ನ ಮತಿಗೆ ಮರವೆಯ ಮಾಡಿದ || ೧ || 23 ||

[ಅಲ್ಲಮನ ಸಮಾಧಾನ]

ತೋಡಿ - ಅಷ್ಟ
ಕಂಡೆನೆಂಬುದು ಕಣ್ಣ ಮುಂದಿನ ಮರಹು |
ಕಂಡಿಲ್ಲವೆಂಬುದು ಕಡುಮನದುರುಹು ||
ಉಂಡು ಕೂಡಿದೆ ಮತ್ತೆ ಅಗಲಿದೆನೆಂಬ |
ಭಂಡಾಟಗಳು ನಮ್ಮ ಭ್ರಾಂತಿಕದಂಬ || ೧ ||

ಭವದ ಪಾಶದ ಬೀಜ ಈ ತನುಮನವು |
ಕವಿದುಕೊಂಡರೆ ಭಾವ ಬಯಲ ಸಂಭ್ರಮವು ||
ಸುವಿವೇಕದಿಂದ ನಿನ್ನೊಳು ಭೇದವಳಿಯೆ |
ಶಿವಗುಹೇಶ್ವರಲಿಂಗ ನೀನೆಂದು ತಿಳಿಯೆ || ೨ ||

ಮನವ ಮನೆಯ ಮಾಡಿಕೊಂಡಿಪ್ಪ ಶಿವನು |
ನಿನಗೆ ಕಂಡೊಡೆ ಅಜಗಣ್ಣ ಕಾಂಬುವನು ||
ತನಗೆ ತನ್ನರಿವಾಗೆ ಮರಹು ನೀಗುವನು |
ಘನ ಗುಹೇಶ್ವರಲಿಂಗ ಬೆಳಕು ತೋರುವನು || ೩ || 26 ||

[ಮುಕ್ತಾಯಕ್ಕನಿಂದ ಖಂಡನೆ]

ಪಂತುವರಾಳಿ - ತ್ರಿವುಡೆ
ಗುರುವಚನವಲ್ಲದಿರೆ ಲಿಂಗವ | ನರಿಯಲಾಗದು ಸರಿಸಮ |
ಗುರುವಚನವಿಲ್ಲದಿರೆ ಜಂಗಮ | ಬರಿದೆ ಮಾತಿನ ಸಂಭ್ರಮ ||
ಗುರುಗಳಿಲ್ಲದ ಜ್ಞಾನ ಬಣ್ಣದಿ | ಬರೆದ ಚಿತ್ರ ತುರಂಗಮ |
ಅರಿವಿನಿರವನು ಮರಹು ಮುಸುಕುವ | ಪರಿಯನೊರೆಯದಿರಲ್ಲಮ || ೧ || 27 ||

[ಅಲ್ಲಮನಿಂದ ವ್ಯಾಖ್ಯಾನ]

ಸುರುಟಿ - ಏಕ
ನಿನಗೆ ನೀನೆ ಗುರುವು | ತಪಸಿನ |
ಕೊನೆಗಾಗುವುದರಿವು ||
ತನು ಬೇರೆಂಬುದು ಕನಸಿನ ಮೌಢ್ಯವು |
ಮನದ ಗುಹೇಶ್ವರ ಘನತರ ತತ್ತ್ವವು || ೧ ||

ಆದಿ ಗುರುವನಾದಿ | ತೋರ್ಪುದು |
ಸಾಧಕನಿಗೆ ಹಾದಿ ||
ಆದುದು ಅದರ ವಿನೋದಕೆ ಜಗದೊಳು |
ಭೇದವು ಎರಡಿದು ಶೋಧಿಸಲೊಂದು || ೨ || 29 ||

[ಮುಕ್ತಾಯಕ್ಕನ ವಾದ]

ವಾರ್ಧಕ
ಅದ್ವೈತ ನೆಲೆಗೊಳಿಸಿ ಎರಡಳಿದೆನೆಂಬವರು |
ಮುದ್ದುಶಿಶು ಕಂಡಂಥ ಕನಸಿನಂತಿರಬೇಕು |
ಬುದ್ಧಿಮಾತನ್ನೊರೆವ ಉದ್ದುರುಟುತನವೇಕೆ ತಿದ್ದಿಕೊಳು ನಿನ್ನ ನೀನು ||
ಇದ್ದುದನು ನೆರೆಯರಿತು ಮರೆಯಬಲ್ಲವ ಮತ್ತೆ |
ಮುಗ್ಧನಾಗಿರಬೇಕು ಅಜಗಣ್ಣನಿದ್ದಂತೆ |
ಶಬ್ದಸಂದಣಿಯನೊಳಗೊಂಡಿರ್ಪ ಮಾತುಗಳು ಸಯವಲ್ಲ ನೋಡು ಪ್ರಭುವೆ || ೧ || 30 ||

[ಅಲ್ಲಮನಿಂದ ಪ್ರತಿವಾದ]

ಕೇದಾರಗೌಳ - ಝಂಪೆ
ಮಾತೊಂದು ಜ್ಯೋತಿರ್ಲಿಂಗ | ಸ್ವರವೆಂಬ |
ಧಾತು ಪರತತ್ತ್ವಸಂಗ ||
ಈ ತಾಳು ತುಟಿ ಸಂಪುಟ | ಸತ್ಕಳಾ |
ತೀತ ಸವಿ ನಾದಾಮೃತ || ೧ ||

ಕಡೆಗೊಂದು ಪೇಳ್ವೆ ಸೊಲ್ಲ | ಶರಣಜನ |
ನುಡಿದು ಸೂತಕಿಗಳಲ್ಲ ||
ಮೃಡ ಗುಹೇಶ್ವರನ ಚರಣ | ನೆನೆಯುತ್ತ |
ನಡೆವವನೆ ನಿಜದ ಶರಣ || ೨ || 32 ||

[ಮುಕ್ತಾಯಕ್ಕನ ವ್ಯಂಗ್ಯ]

ಕಲ್ಯಾಣಿ - ರೂಪಕ
ನೀರುಗಲ್ಲಿನ ಕೊಡದಲ್ಲಿ ಮಾಣಿಕ್ಯವ |
ತೂರಿಕೊಂಡಿರುವೆ ಭಾವಯ್ಯ ||
ಭಾರ ತಾಳದೆ ಸಖಿಯರನರಸುತ್ತಿಹೆ |
ಸಾರವಿಲ್ಲದೆ ಮಾತಾಡದಿರು || ೧ ||

ಬೆಡಗಿನ ನುಡಿಹಂಗು ನಿನಗಿನ್ನು ಹಿಂಗಿಲ್ಲ |
ನಡೆಯ ಬೋಧಿಸುವುದಂತಿರಲಿ ||
ಒಡಲಾಸೆ ನುಡಿಯಾಗಿ ಬಿಡದೆ ಕಾಡುವುದೈಸೆ |
ನಡೆ ಮುಂದೆ ದೂರದಾರಿಯಲಿ || ೨ || 34 ||

[ಅಲ್ಲಮನ ಉತ್ತರ]

ಭಾಮಿನಿ
ತಾನಳಿದು ತಾನುಳಿದು ತನ್ನಲಿ |
ತಾನು ತಾನಾಗಿರುವ ಶರಣಗೆ |
ಮಾನಸದ ಮಂಟಪದಿ ಬೇರೊಂದರಿವು ಬೇಕೇನು ||
ಈ ನೆಲದಿ ನಿಜಶರಣ ನಡೆದರೆ |
ತಾನದುವೆ ನಿರ್ಗಮನ ನುಡಿದರೆ |
ಮೇಣದುವೆ ನಿಶ್ಶಬ್ದವಿದುವೆ ಗುಹೇಶ್ವರನ ಸಾಕ್ಷಿ || ೧ || 35 ||

ದ್ವಿಪದಿ
ಕಾಯಗೊಂಡವರ ಕಣ್ಣಿನಲಿ ಸಂದೇಹ |
ಮಾಯೆಮೀರಿದ ಶರಣರಿಗೆ ಬಯಲೆ ಗೇಹ || ೧ ||

ತನ್ನಲ್ಲಿ ತಾನು ತದ್ಗತನಪ್ಪ ಶರಣ |
ಭಿನ್ನನಲ್ಲನು ನೋಡು ಲಿಂಗಾವತರಣ || ೨ ||

ನುಡಿಯೆಂಬ ಜ್ಞಾನದಿಂ ಕ್ರಿಯೆಯೆಂಬ ನಡತೆ |
ಒಡಗೂಡಿದರೆ ಗುಹೇಶ್ವರನಲ್ಲಿ ಬೆರೆತೆ || ೩ || 38 ||

[ಮುಕ್ತಾಯಕ್ಕನ ಸಮ್ಮತಿ]

ಹಂಸಧ್ವನಿ - ಅಷ್ಟ
ಅಹುದು ಪೇಳಿದುದು ನೀನು | ಶಿವಶರಣರ |
ಮಹಿಮೆಯ ತಿಳಿದೆ ನಾನು ||
ವಹಿಲದಿ ಕಬ್ಬೊನ್ನ ನೀರುಂಡ ತೆರನಂತೆ |
ವಹಿನಿಯೊಳಡಗಿದ ಕರ್ಪೂರದಂತೆ |
ಮಹಿಯೊಳು ಅಜಗಣ್ಣತಂದೆಯನ್ನೊಳಗೊಂಡ |
ಅಹಹಾ ಅಲ್ಲಮ ನಿನ್ನ ಚರಣಕ್ಕೆ ಶರಣೆಂಬೆ || ೧ ||

ಶರಣರ ಸಂಗದಿಂದ | ವೇದ್ಯವು ಘನ |
ತರದ ಕೈವಲ್ಯಾನಂದ ||
ಅರಿವು ಮರೆವು ಕೂಟ ಅಗಲಿಕೆಗಳ ಮೀರಿ |
ಪರತತ್ವವೆಂಬಜಗಣ್ಣನ ಸೇರಿ |
ನಿರವಯಲಿನ ಶೂನ್ಯ ನಿಶ್ಶೂನ್ಯ ಭಾವದಿ |
ಉರಿಯುಂಡ ಕರ್ಪೂರದಂತಾದೆನಯ್ಯಾ || ೨ || 40 ||

ಮಂಗಲಪದ್ಯ

ಮೋಹನ - ಏಕ
ಸುತ್ತೂರ ಪೊರೆವಂಥ ಕೃತ್ತಿವಾಸನೆ ಶಿವ |
ಭಕ್ತರಾಭೀಷ್ಟದಾಯಕ ಮಂಗಳಂ ||
ಹೊತ್ತುಹೊತ್ತಿಗೆ ನಮ್ಮನೆತ್ತಿ ಕಾಪಾಡಯ್ಯ |
ಮುತ್ತಿನಾರತಿಗೈವೆ ಶುಭಮಂಗಳಂ || ೧ || 41 ||

ಕಂದ
ಶ್ರೀಗುರು ಶಿವರಾತ್ರೀಶ್ವರ |
ಯೋಗೀಶ್ವರ ದೇಶಿಕೇಂದ್ರ ಪದಸರಸಿಜದೊಳ್ ||
ಬಾಗುತೆ ಭಕ್ತಿಯೊಳೀ ಪ್ರ |
ತ್ಯಾಗಮ ಕೃತಿಯಂ ಸಮರ್ಪಿಪೆನು ಸಂತಸದೊಳ್ || ೧ || 42 ||

*****ಶುಭಂ*****

ಕೃತಜ್ಞತೆಗಳು

ಅಂತರಜಾಲ ಪ್ರಕಾಶನ ಪ್ರಾಯೋಜಕರು: ನಿರೀಕ್ಷಿಸಲಾಗಿದೆ

ಮೂಲ ಪ್ರಕಾಶಕರು: ಕವಿಯ ಗಣಕೀಕೃತ ಪ್ರತಿ

ಪ್ರಸಂಗ ಪ್ರತಿ ಆಧಾರ: ಕವಿಯ ಗಣಕೀಕೃತ ಪ್ರತಿ

ಪ್ರಸಂಗ ಪ್ರತಿ ಕೊಟ್ಟವರು: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಪ್ರಸಂಗ ಪ್ರತಿ ಒದಗಣೆಗೆ ಸಹಕಾರ: ರವಿ ಮಡೋಡಿ

ಅಂತರಜಾಲ ಪ್ರತಿ ಬರವಣಿಗೆ: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಅಂತರಜಾಲ ಪ್ರತಿ ವಿನ್ಯಾಸ: ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

ಅಂತರಜಾಲ ಪ್ರತಿ ತಿದ್ದುಪಡಿ: ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ: ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ